# ಮುದ್ದೇಬಿಹಾಳ ಅಂಜುಮನ್ ಇಸ್ಲಾಂ ಕಮೀಟಿಯ ಚುನಾವಣೆ-2026

## ಅಂಜುಮನ್ ಹಿತರಕ್ಷಣಾ ಬಣದಿಂದ

ANJUMAN-E-ISLAM COMMITTEE, MUDDEBIHAL

### ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು

ದಿ: 17-08-2026 ಸೋಮವಾರ ಬೆಳಿಗ್ಗೆ 8 ರಿಂದ ಮಧ್ಯಾಹ್ನ 3 ಸ್ಥಳ: ಅಂಜುಮನ್ ಹೈಸ್ಕೂಲ್, ಮುದ್ದೇಬಿಹಾಳ

| ಕ್ರ.ಸಂ. | ಹೆಸರು ಮತ್ತು ವಿವರ | ಚಿಹ್ನೆ | ಮುದ್ರೆ |
|---|---|---|---|
| 01 | ಅಬ್ದುಲ್ ರೆಹೆಮಾನ್ ಎ. ಹಳ್ಳೂರ<br>ವ್ಯಾಪಾರಸ್ಥರು | AIR CONDITION | |
| 34 | ಮಹೇಬೂಬ ಆರ್. ಮುಲ್ಲಾ<br>ಉದ್ಯಮಿದಾರರು (ಟಾಪ್ ಇನ್ ಟೌನ್) | COAT | |
| 35 | ಮೊಹ್ಮದರಫೀಕ ಡಿ. ನಾಗರಾಳ<br>ವ್ಯಾಪಾರಸ್ಥರು | COCONUT TREES | |
| 44 | ಮೋಹ್ಮದ್‌ರಫೀ ಎ. ಲಿಂಗಸೂರ<br>ವಕೀಲರು | PEN DRIVE | |
| 45 | ಮೊಹ್ಮದ್‌ರಫೀಕ ಎಸ್. ಕಲ್ಬುರ್ಗಿ<br>ವ್ಯಾಪಾರಸ್ಥರು | TELEPHONE | |
| 47 | ಮೊಹ್ಮದ್‌ಯುಸೂಫ್ ಎಂ. ಸಾತಿಹಾಳ<br>ಪತ್ರಕರ್ತರು | BRICKS | |
| 51 | ನಬಿರಸೂಲ ಬಿ. ಮುದ್ನಾಳ<br>ವಕೀಲರು | TELEVISION | |
| 52 | ನಜೀರಅಹ್ಮದ್ ಆರ್. ಮಮದಾಪೂರ<br>ಎಂ.ಎ., ಬಿ.ಇಡಿ. | GIFT PACK | |
| 55 | ಮೊಹ್ಮದ್‌ರಫೀಕ ಬಾ. ದ್ರಾಕ್ಷಿ<br>ಮಾಜಿ ಸದಸ್ಯರು, ಪುರಸಭೆ | CARROM BOARD | |
| 59 | ಶಬ್ಬೀರ ಎಂ. ಬಾಗಲಕೋಟ<br>ವಕೀಲರು | NECK TIE | |

ಪ್ರಾಮಾಣಿಕತೆ • ಪಾರದರ್ಶಕತೆ • ಅಭಿವೃದ್ಧಿ

ತಮ್ಮ ಅಮೂಲ್ಯವಾದ ಮತವನ್ನು ಅಂಜುಮನ್ ಹಿತರಕ್ಷಣಾ ಬಣದ ಎಲ್ಲ ಅಭ್ಯರ್ಥಿಗಳಿಗೆ ನೀಡಿ

ಅಂಜುಮನ್ ಇಸ್ಲಾಂ ಸಂಸ್ಥೆಯ ಅಭಿವೃದ್ಧಿಗೆ ಕೈಜೋಡಿಸಿ

ಬಿಸ್ಮಿಲ್ಲಾ ಹಿರ್ರಹಿಮಾನ ನಿರ್ರಹಿಮ್


ಅಲ್ಲಾಹನ ಸಹಾಯ ಹಾಗೂ ಸಮುದಾಯದ ಸಹಕಾರದಿಂದ
ಅಭಿವೃದ್ಧಿಯ ಹೊಸ ಹೆಜ್ಜೆ

ANJUMAN-E-ISLAM COMMITTEE, MUDDEBIHAL

# ಮುದ್ದೇಬಿಹಾಳ ಅಂಜುಮನ್ ಇಸ್ಲಾಂ ಕಮೀಟಿಯ ಚುನಾವಣೆ-2026

## ಅಂಜುಮನ್ ಹಿತರಕ್ಷಣಾ ಬಣ

## ಚುನಾವಣಾ ಅಭಿವೃದ್ಧಿ ಪ್ರಣಾಳಿಕೆ



### ನಮ್ಮ ಸಂಕಲ್ಪ

- ಶಿಕ್ಷಣ ನಮ್ಮ ಆದ್ಯತೆ
- ಪಾರದರ್ಶಕ ಆಡಳಿತ
- ಆಸ್ತಿಗಳ ಸಂರಕ್ಷಣೆ
- ಖಬ್ರಸ್ಥಾನ ಅಭಿವೃದ್ಧಿ
- ಸಮುದಾಯದ ಏಕತೆ

ನಿಮ್ಮ ಅಮೂಲ್ಯವಾದ ಮತವನ್ನು
ಅಂಜುಮನ್ ಹಿತರಕ್ಷಣಾ ಬಣದ ಅಭ್ಯರ್ಥಿಗಳಿಗೆ ನೀಡಿ

VOTE

"ಶಿಕ್ಷಣ – ಪಾರದರ್ಶಕ ಆಡಳಿತ – ಸಮುದಾಯದ ಅಭಿವೃದ್ಧಿ"

**ಅಂಜುಮನ್ ಸಂಸ್ಥೆಯನ್ನು ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಮತ್ತಷ್ಟು ಸದೃಢಗೊಳಿಸುವ ಉದ್ದೇಶದಿಂದ ಅಂಜುಮನ್ ಹಿತರಕ್ಷಣಾ ಸಮಿತಿ ಈ ಕೆಳಗಿನ ಅಭಿವೃದ್ಧಿ ಪ್ರಣಾಳಿಕೆಯನ್ನು ಸಮುದಾಯದ ಮುಂದೆ ಮಂಡಿಸುತ್ತದೆ.**

## 1. ಶಿಕ್ಷಣ ಸಂಸ್ಥೆಗಳ ಸಮಗ್ರ ಅಭಿವೃದ್ಧಿ

* ಅಂಜುಮನ್ ಶಾಲೆ, ಕಾಲೇಜು ಹಾಗೂ ಎಲ್ಲಾ ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ಹೆಚ್ಚಿಸುವುದು
* ವಿದ್ಯಾರ್ಥಿಗಳಿಗೆ ಆಧುನಿಕ ಶಿಕ್ಷಣ, ಡಿಜಿಟಲ್ ಸೌಲಭ್ಯ ಹಾಗೂ ಗ್ರಂಥಾಲಯ ಅಭಿವೃದ್ಧಿಗೆ ಆಧ್ಯತೆ ನೀಡುವುದು
* ಅರ್ಹ ಹಾಗೂ ಅನುಭವಿ ಶಿಕ್ಷಕರ ನೇಮಕಾತಿಗೆ ಕ್ರಮ ಕೈಗೊಳ್ಳುವುದು
* ವಿದ್ಯಾರ್ಥಿ ವೇತನ, ವೃತ್ತಿ ಮಾರ್ಗದರ್ಶನ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ವ್ಯವಸ್ಥೆ ಕಲ್ಪಿಸುವುದು

## 2. ಹೊಸ ಶಿಕ್ಷಣ ವಿಭಾಗಗಳ ಆರಂಭಿಸುವ ಪ್ರಯತ್ನ

* ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯವನ್ನು 2027ನೇ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭಿಸಲಾಗುವುದು
* ಆಂಗ್ಲ ಮಾಧ್ಯಮ CBSE ಪ್ರಾರಂಭಿಸುವದು
* ಸಮುದಾಯದ ಅಗತ್ಯತೆಗೆ ಅನುಗುಣವಾಗಿ ಹೊಸ ಪದವಿ ಹಾಗೂ ವೃತ್ತಿಪರ ಶಿಕ್ಷಣ ವಿಭಾಗಗಳನ್ನು ಆರಂಭಿಸಲು ಪ್ರಯತ್ನಿಸುವುದು
* ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಗೂ NEET, CET, JEE ತರಗತಿ ಪ್ರಾರಂಭಿಸಲಾಗುವುದು
* ಕಂಪ್ಯೂಟರ್ ಶಿಕ್ಷಣ, ಕೌಶಲ್ಯಾಭಿವೃದ್ಧಿ (Skill Development) ಎಲ್.ಕೆ.ಜಿ. ಯಿಂದ ಪಿ.ಜಿ.ವರೆಗೆ, ಪ್ಯಾರಾ ಮೆಡಿಕಲ್, ನರ್ಸಿಂಗ್ ಹಾಗೂ ಇತರೆ ಉದ್ಯೋಗಮುಖಿ ಕೋರ್ಸ್‌ಗಳನ್ನು ಆರಂಭಿಸಲು ಕ್ರಮಕೈಗೊಳ್ಳುವುದು.
* ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಅಗತ್ಯ ಸೌಲಭ್ಯಗಳನ್ನು ವಿಸ್ತರಿಸುವುದು

## 3. ವಾಣಿಜ್ಯ ಹಾಗೂ ಇನ್ನುಳಿದ ಖಾಲಿ ಜಾಗಗಳ ಮಳಿಗೆಗಳ ನಿರ್ಮಾಣ ಉದ್ದೇಶ

* ಎಲ್ಲಾ ಆಸ್ತಿ ದಾಖಲೆಗಳ ಪರಿಶೀಲನೆ, ದೃಢೀಕರಣ ಹಾಗೂ ಪಾರದರ್ಶಕ ನಿರ್ವಹಣೆ
* ವಾಣಿಜ್ಯ ಆಸ್ತಿಗಳ ಆದಾಯವನ್ನು ಶಿಕ್ಷಣ ಮತ್ತು ಸಮಾಜಮುಖಿ ಅಭಿವೃದ್ಧಿಗೆ ಬಳಸುವುದು

## 4. ಖಬ್ರಸ್ಥಾನದ ಅಭಿವೃದ್ಧಿ

* ಖಬ್ರಸ್ಥಾನದ ಸುತ್ತಮುತ್ತ ಭದ್ರತಾ ಕಂಪೌಂಡ್ ನಿರ್ಮಾಣಕ್ಕೆ ಆಧ್ಯತೆ
* ಸ್ವಚ್ಛತೆ, ರಸ್ತೆ, ನೀರಿನ ವ್ಯವಸ್ಥೆ ಹಾಗೂ ಬೆಳಕಿನ ವ್ಯವಸ್ಥೆಯನ್ನು ಸುಧಾರಿಸುವುದು
* ಅಗತ್ಯ ಮೂಲಸೌಕರ್ಯಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸುವುದು

## 5. ಇನ್ನುಳಿದ ಅಪೂರ್ಣ ಕಾಮಗಾರಿಗಳ ಪೂರ್ಣಗೊಳಿಸುವಿಕೆ ಉದ್ದೇಶ

* ಈಗಾಗಲೇ ಬಾಕಿ ಉಳಿದಿರುವ ಶಾದಿ ಮೆಹಲ್ ಹಾಗೂ ಇನ್ನುಳಿದ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಆಧ್ಯತೆಯ ಮೇರೆಗೆ ಪೂರ್ಣಗೊಳಿಸುವುದು.
* ಹೊಸ ಕಾಮಗಾರಿಗಳನ್ನು ಸಮುದಾಯದ ಸಲಹೆ ಪಡೆದು ಯೋಜಿತವಾಗಿ ಆರಂಭಿಸುವುದು.
* ಅಂಜುಮನ್ ಶಾಲಾ, ಕಾಲೇಜು ಹಾಗೂ ವಾಣಿಜ್ಯ ಮಳಿಗೆಗಳನ್ನು ಪರಿಶೀಲಿಸಿ ದುರಸ್ತಿ ಕಾಮಗಾರಿ ಪ್ರಾರಂಭಿಸುವುದು.

**ಅಭಿವೃದ್ಧಿಗೆ ನಿಮ್ಮ ಬೆಂಬಲ-ಭವಿಷ್ಯಕ್ಕೆ ನಿಮ್ಮ ಮತ**

## 6. ಪಾರದರ್ಶಕ ಆಡಳಿತ ಮುದ್ದೇಬಿಹಾಳ ಸಮಸ್ತ ಮುಸ್ಲಿಂ ಬಾಂಧವರ ಮುಂದೆ ಮಂಡಿಸುವುದು

* ಎಲ್ಲಾ ಆದಾಯ–ವೆಚ್ಚಗಳ ಲೆಕ್ಕಪತ್ರವನ್ನು ನಿಯಮಿತವಾಗಿ ಸದಸ್ಯರ ಮುಂದೆ ಮಂಡಿಸುವುದು
* ಆಡಳಿತದಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಉತ್ತರದಾಯಿತ್ವವನ್ನು ಖಚಿತಪಡಿಸುವುದು
* ಸಮುದಾಯದ ಸಲಹೆ ಹಾಗೂ ಭಾಗವಹಿಸುವಿಕೆಗೆ ಹೆಚ್ಚಿನ ಅವಕಾಶ ಕಲ್ಪಿಸುವುದು.

## 7. ಯುವಕರ ಹಾಗೂ ಮಹಿಳೆಯರು – ಸಮಾಜ

* ಯುವಕರಿಗೆ ಉದ್ಯೋಗ ಮಾರ್ಗದರ್ಶನ
* ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ
* ಆರೋಗ್ಯ ಶಿಬಿರಗಳು
* ರಕ್ತದಾನ ಶಿಬಿರಗಳು
* ಬಡ ವಿದ್ಯಾರ್ಥಿಗಳಿಗೆ ಸಹಾಯ
* ಬಡ ವಿದ್ಯಾರ್ಥಿಗಳು, ಅನಾಥರು, ವಿಧವೆಗಳು ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ನೆರವು

## ನಮ್ಮ ಬದ್ಧತೆ

"ಅಂಜುಮನ್ ಸಂಸ್ಥೆ ನಮ್ಮೆಲ್ಲರ ಆಸ್ತಿ. ಪಾರದರ್ಶಕ ಆಡಳಿತ, ಉತ್ತಮ ಶಿಕ್ಷಣ, ಸಮುದಾಯದ ಅಭಿವೃದ್ಧಿ ಹಾಗೂ ಪ್ರತಿಯೊಬ್ಬ ಸದಸ್ಯರ ವಿಶ್ವಾಸವನ್ನು ಗಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತೇವೆ.

**ಒಂದು ವೇಳೆ ನಮ್ಮ ಆಡಳಿತದಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಲ್ಲಿ ನಾವು ಸ್ವಯಂ ಪ್ರೇರಿತವಾಗಿ ಸಮುದಾಯದ ಮುಂದೆ ರಾಜೀನಾಮೆ ನೀಡುತ್ತೇವೆ.**

**ಅಸ್ಸಲಾಮು ಅಲೈಕುಮ್,**

**ಇದರಲ್ಲಿ ನಾವು ಅಂಜುಮನ್ ಹಿತರಕ್ಷಣಾ ಬಣ ದಿನಾಂಕ : 17-08-2026 ಸೋಮವಾರ ರಂದು ಜರುಗಲಿರುವ ಅಂಜುಮನ್-ಎ-ಇಸ್ಲಾಂ ಕಮಿಟಿ ಚುನಾವಣೆಗೆ ತಮ್ಮೆಲ್ಲರ ಆಶೀರ್ವಾದದಿಂದ ಸ್ಪರ್ಧಿಸುತ್ತಿದ್ದೇವೆ.**

**ಆತ್ಮೀಯ ಸಮಾಜದ ಬಂಧುಗಳೇ, ತಮ್ಮೆಲ್ಲರ ಪ್ರೀತಿ, ವಾತ್ಸಲ್ಯ, ಮಾರ್ಗದರ್ಶನದಿಂದ ಪ್ರೇರಿತರಾಗಿ ಕಾರ್ಯನಿರ್ವಹಿಸಲು ತಮ್ಮ ಆಶೀರ್ವಾದ ಸದಾ ನಮ್ಮ ಮೇಲೆ ಬೇಕಾಗಿದೆ. ತಾವು ತಮ್ಮ ಅಮೂಲ್ಯವಾದ ಮತವನ್ನು ನಮ್ಮ ಅಂಜುಮನ್ ಹಿತರಕ್ಷಣಾ ಬಣಕ್ಕೆ ನೀಡುವ ಮೂಲಕ ಪ್ರಚಂಡ ಬಹುಮತದಿಂದ ಆರಿಸಿ ತರಬೇಕಾಗಿ ನಮ್ಮ ವಿನಂತಿ.**

ದಿನಾಂಕ : 17–08–2026 ಸೋಮವಾರ ಬೆಳಿಗ್ಗೆ 8.00 ರಿಂದ ಮಧ್ಯಾಹ್ನ 3.00 ಘಂಟೆವರೆಗೆ
ಸ್ಥಳ : ಅಂಜುಮನ್ ಹೈಸ್ಕೂಲ್, ಮುದ್ದೇಬಿಹಾಳ